

ಟಿ. ಯಲ್ಲಪ್ಪ
ಕಲೆ: ರೂಪಶ್ರೀ ಕಲ್ಲಿಗನೂರು



# ಪ್ರಾಯದ ಪಾಠ

1
ಜೀವನಕ್ಕೇ ಪ್ರಾಯ ಬಂದಂತೆ
ಹೂ ಬಿಟ್ಟು ನಿಂತ ಗಿಡವೆ
ಪ್ರಾಯಕ್ಕೇ ಜೀವ ಬಂದಂತೆ
ಹಾರಿ ಬಂದಿರುವ ದುಂಬಿಯನು
ಬಿಗುಮಾನದಲಿ ದೂರಕ್ಕೆ ತಳ್ಳಬೇಡ
ಅದು ಹಾರಿ ಹೋದರೆ ಮತ್ತೆ
ಮರುಘಳಿಗೆ ಪ್ರಣಯವಂಚಿತ
ನತದೃಷ್ಟ ಹೆಣ್ಣಂತೆ ಕೊರಗಬೇಡ

2
ದೇಹಕ್ಕೇ ಪ್ರಾಯ ಬಂದಂತೆ
ಫಲವ ತೂಗುತ್ತ ನಿಂತ ಮರವೆ
ಜಡಕ್ಕೇ ಜೀವ ಚೈತನ್ಯದ ಹಾಲೂಡಬಂದಂತೆ
ಬಂದಿರುವ ಹಕ್ಕಿಗೆ ಹಣ್ಣ ನೀಡದೇ
ಬರಿಗೈಲೆ ಕಳಿಸಬೇಡ

3
ಹೂ ಬಿಡುವ ಗಿಡಗಳೇ
ಫಲ ಕೊಡುವ ಮರಗಳೇ
ಯಾರು ಬಲ್ಲರು ಹೇಳಿ ಜಗದೊಳಗೆ
ಗಿಡದ ಚೈತನ್ಯವೇ ಹೂವಾದ ಘಳಿಗೆಯನು
ಹೂವಿಗೆ ಪರಿಮಳವು ಬಂದು ಮೈ ಹೊಕ್ಕ
ಸೋಜಿಗದ ಹೊಳಲನ್ನು!
ಹೂವು ಉದುರಿದ ಮೇಲೆ
ಹಣ್ಣು, ಮಣ್ಣು ಸೇರಿದ ಮೇಲೆ
ನಿಮ್ಮ ಪ್ರಾಯದ ಪರಾಗವ ಸ್ಪರ್ಶಿಸಿ
ಮಧುಬಟ್ಟಲಿಗೆ ತುಟಿ ಇಡುವ
ದುಂಬಿಗಳ ಕೊರಗಲ್ಲೇ ಸಾಯಬೇಡಿ

4
ಒಮ್ಮೆ ಬರುವುದು ಪ್ರಾಯ
ಹೂವಿಗೆ ಪರಿಮಳವು ಬಂದಂತೆ
ಬಿಂಕ ಬಿಗುಮಾನದ ತೋಟದಲಿ
ಪ್ರಾಯದ ಹೂವು ಅರಳುವುದಿಲ್ಲ
ಹರೆಯ ಜಾರಿದ ಮೇಲೆ
ಮಧುಬಟ್ಟಲಿಗೆ ದುಂಬಿ ಸುಳಿಯುವುದಿಲ್ಲ

5
ಪ್ರಾಯ ಇರುವಾಗಲೇ ಒಮ್ಮೆ ಹಾಡಿಕೊಳ್ಳಿರಿ
ನೀವೂ ಕೂಡ ಕವಿಯ ಈ ಹಾಡ
'ನಾ ನಿನಗೆ, ನೀ– ನನಗೆ ಜೇನಾಗುವಾ
ರಸದೇವ ಗಂಗೆಯಲಿ ಮೀನಾಗುವಾ
ರತಿರೂಪಿ ಭಗವತಿಗೆ ಮುಡಿಪಾಗುವಾ'